ದರ್ಶನ್ ಅವರ ಬಗ್ಗೆ ಮೃದು ನಿಲುವು ತಾಳಿದ ಚಿತ್ರರಂಗದ ಗಣ್ಯರ ವರ್ತನೆಯನ್ನು ಜನರು ಒಪ್ಪುವುದಿಲ್ಲ. ನಿಖಿತಾ ಅವರಿಗೆ ಬಹಿಷ್ಕಾರ ಹಾಕಿ ದರ್ಶನ್ ಅವರಿಗೆ ಕನಿಷ್ಠ ಶಿಕ್ಷೆಯನ್ನೂ ನೀಡದಿರುವುದು ಸರಿಯೇ ಎಂಬ ಪ್ರಶ್ನೆಗೆ ಚಿತ್ರರಂಗದ ಗಣ್ಯರು ಉತ್ತರ ಹೇಳುವ ಸ್ಥಿತಿಯಲ್ಲಿ ಇಲ್ಲ.

# ರಿಯಲ್ ಮತ್ತು ರೀಲ್

ಪತ್ನಿಯ ಮೇಲೆ ಹಲ್ಲೆ ಮಾಡಿದ ಆರೋಪಕ್ಕಾಗಿ ಜೈಲು ಸೇರಿ, ಅಲ್ಲಿಂದ ಆಸ್ಪತ್ರೆಗೆ ದಾಖಲಾಗಿ ಜಾಮೀನು ಪಡೆಯಲು ನ್ಯಾಯಾಲಯಗಳ ಎದುರು ಕೈಕಟ್ಟಿ ನಿಲ್ಲುವಂತಾದ ನಟ ದರ್ಶನ್ ಅವರ ದುಃಸ್ಥಿತಿಗೆ ಅವರ ದುರಂಹಕಾರದ ನಡವಳಿಕೆಯೇ ಕಾರಣ. ಪತ್ನಿ ಪೀಡಕರಿಗೆಲ್ಲ ಇಂತಹ ಸ್ಥಿತಿ ಬರುತ್ತದೆ ಎಂದಾದರೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಕಡಿಮೆ ಆಗಬಹುದೇನೋ. ತೆರೆಯ ಮೇಲೆ ಕಾಣುವ ದರ್ಶನ್‌ಗೂ ಅವರ ವೈಯಕ್ತಿಕ ಜೀವನಕ್ಕೂ ಅಪಾರ ಅಂತರವಿದೆ ಎಂಬುದು ಜನರಿಗೆ ಗೊತ್ತಿರಲಿಲ್ಲ. ಈಗ ಗೊತ್ತಾಗಿದೆ. ತೆರೆಯ ಮೇಲೆ ಸುಸಂಸ್ಕೃತ ನಡವಳಿಕೆಯ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಿದ್ದ ದರ್ಶನ್ ಪತ್ನಿ ಹಾಗೂ ಪುಟ್ಟ ಮಗನ ಪಾಲಿಗೆ ಖಳನಾಯಕನಾಗಿದ್ದರು ಎಂದು ಅವರ ಪತ್ನಿಯೇ ದೂರಿನಲ್ಲಿ ಹೇಳಿದ್ದರು. ಚಿತ್ರರಂಗದ ಗಣ್ಯರ ಒತ್ತಾಯಕ್ಕೆ ಮಣಿದು ಪತಿಯ ರಕ್ಷಣೆಗೆ ವಿಜಯಲಕ್ಷ್ಮಿ ಮುಂದಾದರೂ ಅದರಿಂದ ಪ್ರಯೋಜನ ಆಗಲಿಲ್ಲ. ಹಲ್ಲೆ, ಅವಮಾನಗಳಿಂದ ನೊಂದಿದ್ದರೂ ಅವರು ದರ್ಶನ್ ರಕ್ಷಣೆಗೆ ಧಾವಿಸಿದರು. ಈ ಬೆಳವಣಿಗೆಯನ್ನು ದರ್ಶನ್ ಅರ್ಥ ಮಾಡಿಕೊಂಡರೆ ಅವರ ಭವಿಷ್ಯದ ಜೀವನ ಹಸನಾದೀತು.

ದರ್ಶನ್ ವೈಯಕ್ತಿಕ ಬದುಕು ಇಷ್ಟು ಕೆಟ್ಟದಾಗಿದೆ ಎಂದು ಅವರ ಅಭಿಮಾನಿಗಳೂ ಊಹಿಸಿರಲಿಲ್ಲ. ಅವರ ಪತ್ನಿ ನೀಡಿದ ದೂರು ದರ್ಶನ್ ಅವರ ಮುಖವಾಡವನ್ನು ಕಳಚಿ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿತು. ದರ್ಶನ್ ಒಬ್ಬ ಪತಿ ಹಾಗೂ ಮಗುವಿನ ತಂದೆಯಾಗಿ ನಮ್ಮ ಸಾಮಾಜಿಕ ವ್ಯವಸ್ಥೆ ರೂಢಿಸಿಕೊಂಡು ಬಂದ ಕನಿಷ್ಠ ಸನ್ನಡತೆಗಳನ್ನು ಪಾಲಿಸಿದ್ದರೆ ಅವರಿಗೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ನಾಲ್ಕು ಗೋಡೆಗಳ ನಡುವೆ ಹೆಂಡತಿ ಹಾಗೂ ಮಗುವನ್ನು ಗೋಳು ಹುಯ್ದುಕೊಂಡದ್ದಕ್ಕೆ ಅವರು ಅಪಾರ ಬೆಲೆ ತೆತ್ತಿದ್ದಾರೆ.

ಪತ್ನಿ, ಮಗುವಿನ ಮೇಲೆ ದರ್ಶನ್ ನಡೆಸಿದ ದೌರ್ಜನ್ಯವನ್ನು 'ಗಂಡ ಹೆಂಡಿರ ಸಾಮಾನ್ಯ ಜಗಳ' ಎಂದೇ ಚಿತ್ರರಂಗದ ಗಣ್ಯರು ಭಾವಿಸಿ, ಅವರ ರಕ್ಷಣೆಗೆ ಮುಂದಾದರು. ಈ ಗಣ್ಯರ ಹೇಳಿಕೆಗಳು ಮತ್ತು ನಡವಳಿಕೆಗಳು ಸಾರ್ವಜನಿಕರಿಗೆ ಹೊಣೆಗೇಡಿತನದ ವರ್ತನೆಯಂತೆ ಕಾಣಿಸಿವೆ. ದರ್ಶನ್ ಅವರ ದುರ್ವರ್ತನೆಯನ್ನು ಬಹಿರಂಗವಾಗಿ ಖಂಡಿಸಿ, ಆನಂತರವೇ ಜಗಳವನ್ನು ಬಗೆಹರಿಸುವ ಪ್ರಯತ್ನ ಮಾಡಿದ್ದರೆ ಅವರ ನಡವಳಿಕೆ ಜನರಿಗೆ ಇಷ್ಟವಾಗುತ್ತಿತ್ತೇನೋ. ಆ ಕೆಲಸ ಮಾಡದೆ 'ಗಂಡ, ಹೆಂಡತಿಯನ್ನು ಹೊಡೆಯುವುದು, ಮಗ, ತಾಯಿಯನ್ನು ಹೊಡೆಯುವುದು ಸಾಮಾನ್ಯ ನಡವಳಿಕೆ' ಎಂಬ ಬಾಲಿಶ ಹೇಳಿಕೆ ನೀಡುವ ಮೂಲಕ ಹಿರಿಯ ನಟ ಅಂಬರೀಶ್ ಇಡೀ ಪ್ರಕರಣವನ್ನು ತೀರಾ ಲಘುವಾಗಿ ಕಂಡರು.

ದರ್ಶನ್ ಕುಟುಂಬ ಕಲಹಕ್ಕೆ ನಟಿ ನಿಖಿತಾ ಕಾರಣ ಎಂಬ ನಿರ್ಧಾರ ಬಂದ ಕನ್ನಡ ಚಿತ್ರ ನಿರ್ಮಾಪಕರ ಸಂಘ ಅವರನ್ನು ಮೂರು ವರ್ಷ ಚಿತ್ರರಂಗದಿಂದ ಬಹಿಷ್ಕರಿಸುವ ಏಕಪಕ್ಷೀಯ ನಿರ್ಧಾರ ತೆಗೆದುಕೊಂಡು ಟೀಕೆಗೆ ಗುರಿಯಾಯಿತು. ನಂತರ ಬಹಿಷ್ಕಾರ ಹಿಂದಕ್ಕೆ ಪಡೆದು ನಗೆಪಾಟಲಿಗೆ ಈಡಾಗಿದೆ. ದರ್ಶನ್ ಅವರ ವರ್ತನೆಯನ್ನು ಕೆಲವು ಕಲಾವಿದರು ವೈಯಕ್ತಿಕ ನೆಲೆಯಲ್ಲಿ ಖಂಡಿಸಿದ್ದರೂ ಇಡೀ ಚಿತ್ರರಂಗ ದರ್ಶನ್ ರಕ್ಷಣೆಗೆ ಮುಂದಾಗಿತ್ತು ಎಂದು ಸಾರ್ವಜನಿಕರು ಭಾವಿಸುವಂತಾಯಿತು. ದರ್ಶನ್ ಅಭಿಮಾನಿಗಳೆಂದು ಹೇಳಿಕೊಂಡ ಕೆಲವರು ಮೊದಲ ದಿನ ಅವರ ಬಿಡುಗಡೆಗೆ ಒತ್ತಾಯಿಸಿ ಬಸ್ಸಿಗೆ ಕಲ್ಲು ತೂರುವ ದುಸ್ಸಾಹಸ ಮಾಡಿದರು. ಕಾನೂನಿನ ಎದುರು ಅಭಿಮಾನ ಗೌಣ ಎಂಬುದನ್ನು ಅಭಿಮಾನಿಗಳು ಇನ್ನಾದರೂ ಅರ್ಥ ಮಾಡಿಕೊಳ್ಳಬೇಕು.

ದರ್ಶನ್ ಅವರ ಬಗ್ಗೆ ಮೃದು ನಿಲುವು ತಾಳಿದ ಚಿತ್ರರಂಗದ ಗಣ್ಯರ ವರ್ತನೆಯನ್ನು ಜನರು ಒಪ್ಪುವುದಿಲ್ಲ. ನಿಖಿತಾ ಅವರಿಗೆ ಬಹಿಷ್ಕಾರ ಹಾಕಿ ದರ್ಶನ್ ಅವರಿಗೆ ಕನಿಷ್ಠ ಶಿಕ್ಷೆಯನ್ನೂ ನೀಡದಿರುವುದು ಸರಿಯೇ ಎಂಬ ಪ್ರಶ್ನೆಗೆ ಚಿತ್ರರಂಗದ ಗಣ್ಯರು ಉತ್ತರ ಹೇಳುವ ಸ್ಥಿತಿಯಲ್ಲಿ ಇಲ್ಲ. ಒಟ್ಟಾರೆ ದರ್ಶನ್ ಪ್ರಕರಣ ಕನ್ನಡ ಚಿತ್ರರಂಗದಲ್ಲಿರುವ ಗೊಂದಲದ ಹಾಗೂ ಎಡಬಿಡಂಗಿ ಮನಸ್ಥಿತಿಯನ್ನು ಎತ್ತಿ ತೋರಿಸಿದೆ. ದರ್ಶನ್ ಅವರನ್ನು ಮಾದರಿ ಎಂದು ಭಾವಿಸಿ ಆರಾಧಿಸುತ್ತಿದ್ದ ಅನೇಕ ಅಭಿಮಾನಿಗಳಿಗೆ ಭ್ರಮ ನಿರಸನವಾಗಿದೆ. ಅದೇನೇ ಇರಲಿ, ದರ್ಶನ್ ಉತ್ತಮ ನಟ. ಈ ಪ್ರಕರಣದಿಂದ ಅವರು ಪಾಠ ಕಲಿಯಬೇಕು. ಉತ್ತಮ ಭವಿಷ್ಯವನ್ನು ಸನ್ನಡತೆಯ ಮೂಲಕವೇ ರೂಪಿಸಿಕೊಳ್ಳಲು ಸಾಧ್ಯವಿದೆ. ಅವರ ವೈವಾಹಿಕ ಜೀವನ ಸುಗಮವಾಗಬೇಕು ಎಂದು ಸಿನಿಮಾ ಅಭಿಮಾನಿಗಳು, ಸಾರ್ವಜನಿಕರು ಬಯಸುತ್ತಾರೆ.



■ ಪಿ.ಕೆ. ಹರಿಯಬ್ಬೆ